# ಕ್ರಿಕೆಟ್ ಭುವನದ ಬೆಡಗು ಮಹಿ

■ ಗಿರೀಶ ದೊಡ್ಡಮನಿ



ಎರಡೂವರೆ ದಶಕಗಳ ಹಿಂದಿನ ಮಾತು. ರಾಂಚಿ ನಗರದ ಹೃದಯ ಭಾಗದಲ್ಲಿರುವ ಶಾಲೆಯ ಮೈದಾನದಲ್ಲಿ ಆ ಹುಡುಗ ತನ್ನ ಪಾಡಿಗೆ ತಾನು ಫುಟ್‌ಬಾಲ್ ಆಡಿಕೊಂಡಿದ್ದ. ಚೆಂಡು ಗೋಲು ಬಲೆಗೆ ಅಪ್ಪಳಿಸದಂತೆ ಚುರುಕಾಗಿ ಅತ್ತಿಂದಿತ್ತ ಜಿಗಿದು ತಡೆಯುತ್ತಿದ್ದ. ಅಪ್ಪ ಅಮ್ಮನ ಕಟ್ಟಳೆಯಂತೆ ಓದು–ಬರಹದ ನಡುವೆ ಒಂದಿಷ್ಟು ಫುಟ್‌ಬಾಲ್ ಆಟದ ಗಮ್ಮತ್ತು ಆ ಹುಡುಗನ ಬದುಕಿನಲ್ಲಿತ್ತು. ಯಾವಾಗ ಆ ಶಾಲೆಯ ಕ್ರಿಕೆಟ್ ಕೋಚ್ ಕೇಶವ್ ಬ್ಯಾನರ್ಜಿ ಅವರ ಕಣ್ಣು ಬಿತ್ತೋ, ಆ ಹುಡುಗನ ಜೀವನವೇ ಬದಲಾಗಿಹೋಯಿತು. ಆ ವಿದ್ಯಾರ್ಥಿ ಭಾರತ ಕ್ರಿಕೆಟ್‌ನ ದಿಗ್ಗಜನಾಗಿ ಬೆಳೆದು, ವಿಶ್ವ ಕ್ರಿಕೆಟ್ ಲೋಕದ ಯಶಸ್ವಿ ನಾಯಕರಲ್ಲಿ ಒಬ್ಬರಾಗಿ ಬೆಳೆದಿದ್ದು ಇತಿಹಾಸ.

ಹೌದು; ಆ ಹುಡುಗನೇ ಮಹೇಂದ್ರಸಿಂಗ್ ಧೋನಿ. ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿಯಾಗಿ ವರ್ಷಗಳು ಉರುಳಿದರೂ ಧೋನಿಯ ವರ್ಚಸ್ಸು ಮಾತ್ರ ಬದಲಾಗಿಲ್ಲ. 'ಕೂಲ್ ಕ್ಯಾಪ್ಟನ್' ಖ್ಯಾತಿಯ ಮಹಿ ಈಗ ಪ್ರತಿಷ್ಠಿತವಾದ 'ಐಸಿಸಿ ಹಾಲ್ ಫೇಮ್' ಅಂದರೆ, ವಿಶ್ವ ಕ್ರಿಕೆಟ್‌ನ 'ಬೆಡಗಿನ ಭುವನ'ವನ್ನು ಸೇರಿದ್ದಾರೆ. ಜಾಗತಿಕ ಮಟ್ಟದಲ್ಲಿ ಕ್ರಿಕೆಟ್ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿರುವ ಆಟಗಾರರಿಗೆ ಈ ಗೌರವ ಪ್ರದಾನ ಮಾಡಲಾಗುತ್ತದೆ. ಇದಕ್ಕೆ ಪಾತ್ರರಾದ ವಿಶ್ವದ 122ನೇ ಹಾಗೂ ಭಾರತದ 11ನೇ ಆಟಗಾರನೆಂಬ ಹೆಗ್ಗಳಿಕೆ ಧೋನಿಯದ್ದು. ಮುಂದಿನ ತಿಂಗಳು 44ನೇ ವಸಂತಕ್ಕೆ ಕಾಲಿಡಲಿರುವ ಮಹಿಗೆ ಲಭಿಸಿರುವ 'ಅಡ್ವಾನ್ಸ್ ಗಿಫ್ಟ್' ಕೂಡ ಹೌದು.

## ಮಧ್ಯಮ ವರ್ಗದವರ ಆಶಾಕಿರಣ

ಮುಂಬೈನ ಶಾರದಾಶ್ರಮ ಶಾಲೆಯ ಮೈದಾನ, ದೆಹಲಿಯ ಫಿರೋಜ್ ಶಾ ಕೋಟ್ಲಾ, ಕೋಲ್ಕತ್ತದಲ್ಲಿ ಈಡನ್ ಗಾರ್ಡನ್ಸ್ ಮತ್ತು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಗಳು ಹಲವು ವರ್ಷಗಳಿಂದ ಪ್ರತಿಭಾವಂತ ಕ್ರಿಕೆಟಿಗರನ್ನು ಸಿದ್ಧಗೊಳಿಸಿ ಕೊಡುವ ಕಾರ್ಖಾನೆಗಳು. ಆದರೆ ಜಾರ್ಖಂಡ್‌ನ ರಾಜಧಾನಿ ರಾಂಚಿಯಲ್ಲಿ ಇಂತಹ ಯಾವುದೇ ಕಾರ್ಖಾನೆ ಇರಲಿಲ್ಲ. ಅಲ್ಲಿದ್ದದ್ದು ಮೆಕಾನ್ ಫ್ಯಾಕ್ಟರಿಯ ಮೈದಾನ ಮಾತ್ರ. ಆ ಮೈದಾನದಲ್ಲಿ ಟರ್ಫ್ ವಿಕೆಟ್ ಇರಲಿಲ್ಲ. ಕಲ್ಲು, ಮಣ್ಣು ಇರುವ ಹೊರಾಂಗಣವಿತ್ತು. ಅದೇ ಅಂಗಳದಿಂದ ಎದ್ದು ಬಂದ ಮಹೇಂದ್ರಸಿಂಗ್ ಧೋನಿ ಕ್ರಿಕೆಟ್ ಜಗತ್ತಿನಲ್ಲಿ ದೂಳೆಬ್ಬಿಸಿದರು.

ಮಧ್ಯಮ ವರ್ಗದ ಕುಟುಂಬದ ಸವಾಲುಗಳು, ಆಗಿನ ಬಿಹಾರ ಕ್ರಿಕೆಟ್ ಸಂಸ್ಥೆಯಲ್ಲಿದ್ದ ಕೆಟ್ಟ ರಾಜಕೀಯವನ್ನು ಎದುರಿಸುತ್ತಲೇ ರಾಷ್ಟ್ರೀಯ ತಂಡದ ಕದ ತಟ್ಟಿದ್ದು ಸಣ್ಣ ಸಾಧನೆಯಾಗಿರಲಿಲ್ಲ. ಆಗ ಭಾರತ ತಂಡದ ನಾಯಕ ಸೌರವ್ ಗಂಗೂಲಿಗೆ ಉದ್ದ ಕೂದಲಿನ ಧೋನಿಯ ಮೇಲೆ ಅದೆಂಥದೋ ವಿಶ್ವಾಸ. ಬಾಂಗ್ಲಾದೇಶ ಎದುರಿನ ಸರಣಿಯಲ್ಲಿ ಕಣಕ್ಕಿಳಿಸಿದರು. ಆ ಸರಣಿಯ ಮೂರು ಪಂದ್ಯಗಳಲ್ಲಿಯೂ ಧೋನಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಆದರೂ ಪಾಕಿಸ್ತಾನ ಎದುರಿನ ಸರಣಿಗೆ ಅವಕಾಶ ಸಿಕ್ಕಿತ್ತು. ಅದರಲ್ಲೂ ಮೊದಲ ಅವಕಾಶದಲ್ಲಿ ಒಂದಂಕಿ ಗಳಿಕೆ. ನಂತರದ ಪಂದ್ಯದಲ್ಲಿಯೂ ಅದೇ ಗತಿಯಾಗಿದ್ದರೆ ಮತ್ತೆ ರಾಂಚಿಯತ್ತ ಮುಖ ಮಾಡಬೇಕಿತ್ತು ಧೋನಿ. ಆದರೆ ಹಾಗಾಗಲಿಲ್ಲ.

2005ರಲ್ಲಿ ವಿಶಾಖಪಟ್ಟಣದಲ್ಲಿ ನಡೆದಿದ್ದ ಪಾಕ್ ಎದುರಿನ ಎರಡನೇ ಪಂದ್ಯದಲ್ಲಿ ಭರ್ಜರಿ ಶತಕ ಬಾರಿಸಿಬಿಟ್ಟರು. ಇಡೀ ಕ್ರಿಕೆಟ್ ಜಗತ್ತಿನ ಗಮನವನ್ನು ತಮ್ಮತ್ತ ಸೆಳೆದುಕೊಂಡರು. ನಂತರ ಕ್ರಿಕೆಟ್ ಇತಿಹಾಸ ಪುಸ್ತಕದಲ್ಲಿ ಧೋನಿ ಯುಗದ ಆರಂಭವಾಗಿದ್ದು ಸುಳ್ಳಲ್ಲ.

2007ರಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಹೀನಾಯ ಸೋಲನುಭವಿಸಿತ್ತು. ರೊಚ್ಚಿಗೆದ್ದಿದ್ದ ಅಭಿಮಾನಿಗಳು